ಹೆಂಡತಿ ಇಬ್ಬರೂ ದುಡಿಯುವುದಾದರೆ ಅವರ ಭವಿಷ್ಯ ಆರ್ಥಿಕವಾಗಿ ಉತ್ತಮವಾಗುತ್ತದಲ್ಲಾ... ಆದರೆ ತಾಯಿತಂದೆಯರ ಬಗ್ಗೆ ಅಷ್ಟೆಲ್ಲಾ ಗೌರವ ಇಟ್ಟುಕೊಂಡಿದ್ದ. ಇಲ್ಲಿಯ ಕುಟುಂಬದ ಹೆಚ್ಚಿನ ಆರ್ಥಿಕ ಹೊಣೆಯೂ ಇವನದೇ ಆಗಿತ್ತಲ್ಲ. ಇದೀಗ ಅವರನ್ನು ಬಿಟ್ಟುಹೋಗಲು ಕಷ್ಟವೆನಿಸಲಿಲ್ಲವೆ? ಮಗನಿಗೆ ಒಳ್ಳೆ ಬಾಳು ಸಿಕ್ಕಿರುವಾಗ ಅವರೇ ಒಪ್ಪಿ ಕಳುಹಿಸಿರಬಹುದು. ಅಲ್ಲಿಂದಲೆ ಹಣ ಸಹಾಯ ಮಾಡಿಯಾನು. ಮುಖ್ಯವಾಗಿ ಸ್ಲಂನಲ್ಲಿರುವ ಆ ಮನೆಯಲ್ಲಿ ಅವನ ಹೆಂಡತಿ ವಾಸ ಮಾಡಲು ಒಪ್ಪಬೇಕಲ್ಲ. ಏನೋ ಅವನು ಹೇಗೋ ನಿಭಾಯಿಸಿಯಾನು. ಹೊಂದಾಣಿಕೆಯ ಸ್ವಭಾವ ಅವನಿಗೆ ರಕ್ತಗತವಾಗಿರಬೇಕು ಎಂಬೆಲ್ಲಾ ವಿಚಾರವೂ ಮನಸ್ಸಿಗೆ ಬಂದಿತ್ತು.

ಆರು ತಿಂಗಳಾದರೂ ಬಾಲನ್ ಇತ್ತ ಬರಲೇ ಇಲ್ಲ. ಅವನ ವಿಷಯವೂ ಏನೂ ತಿಳಿಯಲಿಲ್ಲ. ಪತ್ನಿಯೊಂದಿಗೆ ಸುಖವಾಗಿರಬಹುದು... ತಾಯಿತಂದೆಯರ ಬಳಿಗೆ ಬಂದರೂ ಇಲ್ಲಿಗೆ ಬರುವಷ್ಟು ಪುರುಸೊತ್ತು ಅವನಿಗಿರಬೇಕಲ್ಲ... ಬರಬರುತ್ತಾ ಅವನನ್ನು ಪ್ರಯತ್ನಪೂರ್ವಕವಾಗಿ ಮರೆಯಲು ಶ್ರಮಿಸುತ್ತಿದ್ದೆ. ಈಗ ಮೊದಲಿನಂತೆ ತರಕಾರಿಗೆ ಒಬ್ಬನಿಗಾಗಿಯೇ ಕಾಯುವುದು ಎಂದಿಲ್ಲವಾದ್ದರಿಂದ ಯಾರ ಹತ್ತಿರವಾದರೂ ತೆಗೆದುಕೊಳ್ಳಬಹುದಿತ್ತು. ಅದೊಂದು ದಿನ ತರಕಾರಿ ಕೊಳ್ಳಲು ಗಾಡಿಯಾತನ ಬಳಿ ಬಂದಾಗ ಅಚ್ಚರಿಯೆಂಬಂತೆ, 'ಬಾಲನ್ ವಿಷಯ ಗೊತ್ತಾಯಿತೆ ಅಮ್ಮಾವ್ರೆ?' ಎಂದು ಪಿಸುಮಾತಿನಲ್ಲಿ ಉಲಿದಿದ್ದ.

ಹಿಂದೊಮ್ಮೆ ನಾನು ಅವನ ಬಳಿ ಬಾಲನ್ ವಿಷಯ ವಿಚಾರಿಸಿದ್ದೆನೆಂದು ಕಾಣುತ್ತದೆ. ಬೇರೆಯವರು ಪಕ್ಕದಲ್ಲಿರುವುದನ್ನು ಗಮನಿಸಿದವನಂತೆ, 'ನಾಳೆ ಬರ್ತೀನಲ್ಲ ಅಮ್ಮಾವ್ರೆ... ಆಗ ಹೇಳ್ತೀನಿ...' ಎಂದು ಕುತೂಹಲವನ್ನು ಹಾಗೆಯೇ ಬೆಳೆಯಗೊಟ್ಟು ಗಾಡಿಯೊಂದಿಗೆ ನಡೆದಿದ್ದ.

ತನ್ನ ಬಳಿ ತರಕಾರಿ ಕೊಂಡುಕೊಳ್ಳಲಿ ಎಂಬುದಕ್ಕಾಗಿ ಈ ರೀತಿ ಹೇಳುತ್ತಿದ್ದಾನೆಯೆ ಎಂದೂ ಅನ್ನಿಸಿ, ಛೆ! ಹಾಗಿರಲಾರದು ಎಂದುಕೊಂಡು ಬಂದಂತಹ ಯೋಚನೆಗಳನ್ನು ಪಕ್ಕಕ್ಕೆ ತಳ್ಳಿ ಮತ್ತೊಂದು ದಿನಕ್ಕಾಗಿ ಕಾಯುತ್ತಿದ್ದೆ.

ಏನಿದ್ದೀತು ಬಾಲನ್ ವಿಷಯ... ಬಹಳ ಬದಲಾಗಿದ್ದಿರಬಹುದೆ... ಅಥವಾ ಇವನೇ ಏನೋ ಕಥೆ ಕಟ್ಟಿ ಹೇಳಿಯಾನೆ... ನಾನೇ ಹೋಗಿ ಒಮ್ಮೆ ನೋಡಿಬರುವಂತಿದ್ದರೆ... ಪ್ರಪಂಚದ ಯಾವುದೇ ಮೂಲೆಯೂ ಅತೀ ಹತ್ತಿರ ಎನ್ನಿಸುವ ಈ ಕಾಲದಲ್ಲಿ ಚೆನ್ನೈ ಎಷ್ಟು ದೂರ... ಸುಮ್ಮನೆ ಹೀಗೆಲ್ಲ ಅಂದುಕೊಳ್ಳುವುದಷ್ಟೆ. ಅವನಿದ್ದ ಆ ಸ್ಲಮ್‌ನ ಮನೆಯನ್ನೇ ಇದುವರೆಗೂ ನೋಡಿಲ್ಲ... ಗೊತ್ತಿದ್ದಿದ್ದರೆ ಅವರ ಬಳಿಯಾದರೂ ಹೋಗಿ ವಿಚಾರಿಸಬಹುದಿತ್ತು. ಆದರೆ ಹಾಗೆಲ್ಲ ಹೋಗುವುದು ಸರಿಯೆ... ಅವರು ನನ್ನನ್ನು ನಂಬಿ ಇರುವ ವಿಷಯವನ್ನು ಹೇಳುತ್ತಾರೆಯೆ? ಹೀಗೆ ಗುಣಾಕಾರ, ಭಾಗಾಕಾರ ಮಾಡುತ್ತಲೆ, ಬರಬಹುದಾದ ಯಾವುದೋ ಅನಿರೀಕ್ಷಿತ ಸುದ್ದಿಯ ನಿರೀಕ್ಷೆಯಲ್ಲಿದ್ದೆ. ಮನೆಯವರ ಹತ್ತಿರವೂ ಅದೆಷ್ಟೋ ಬಾರಿ ಹೇಳಿದ್ದಾಯಿತು. 'ಬಾಲನ್ ಹೇಗಿದ್ದಾನೊ, ಅವನಿಗೇನಾಗಿದೆಯೊ... ಅವನ ವಿಷಯ ಇನ್ನೊಬ್ಬಾತ ನಾಳೆ ಹೇಳುತ್ತಾನಂತೆ,' ಎಂದೆಲ್ಲಾ ಚಡಪಡಿಸುತ್ತಿದ್ದೆ.

'ಅವನು ಅಲ್ಲಿ ಚೆನ್ನಾಗಿಯೆ ಇರುತ್ತಾನೆ... ಇಲ್ಲಿ ಇರುವವರ ಬಳಿಯೆಲ್ಲಾ ನೀನೇಕೆ ಅವನ ಪ್ರಸ್ತಾಪ ಮಾಡಬೇಕು... ಅವರು ಏನು ಹೇಳುತ್ತಾರೊ, ಅದು ನಿಜವೆಂದು ನಂಬುತ್ತೀಯಾ... ಅಥವಾ ತೊಂದರೆಯೇನಾದರೂ ಆಗಿದ್ದರೆ ನೀನದನ್ನು ಸರಿಪಡಿಸುತ್ತೀಯಾ... ನಿನ್ನ ಒಣ ಮಾತಿನ ಅನುಕಂಪ ಅತಿ ಹೆಚ್ಚಾಯಿತು.'